# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 4/2023

ಚಾಸಾ-4 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 06-01-2026

| | | |
|---|---|---|
| ಹೆಸರು | : | ವಿಶ್ವನಾಥ |
| ತಂದೆಯ ಹೆಸರು | : | ಸಿಧ್ರಾಮಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | PC-124 |
| ವಾಸಸ್ಥಳ | : | ಅಫಜಲಪುರ ಪಿ.ಎಸ್. |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2022 ರಿಂದ ಸ್ಥದವರೆಗೆ ನಾನು ಅಫಜಲಪೂರ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿನಾಂಕಃ 03-06-2022 ರಂದು ಬೆಳಿಗ್ಗೆ 11 ಗಂಟೆಗೆ ಠಾಣೆಯಲ್ಲಿದ್ದಾಗ ಚಾಸಾ 1 ರವರು ನನಗೆ ಮತ್ತು ಚಾಸಾ 5 ರವರಿಗೆ ಕರೆದು ದಾಳಿ ಮಾಡಲು ಹೋಗುವುದಿದೆ ಎಂದು ತಿಳಿಸಿರುತ್ತಾರೆ. ಶಿವಪುರು ಗ್ರಾಮದಲ್ಲಿ ಭೀಮಾ ನದಿಯಿಂದ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ನಂತರ ಸಮಯ 11-30 ಕ್ಕೆ ನನಗೆ ಮತ್ತು ಚಾಸಾ 1, 5 ರವರು ಸರಕಾರಿ ಜೇಪಿನಲ್ಲಿ 11-30 ಕ್ಕೆ ಠಾಣೆಯಿಂದ ಹೊರಟು ಬನ್ನಟ್ಟಿ ಕ್ರಾಸ ಹತ್ತಿರ ಇರುವ ಮಲ್ಲಯ್ಯನ ದೇವಸ್ಥಾನ ಹತ್ತಿರ ನಿಂತಿರುತ್ತೇವೆ. ಆ ಸಮಯದಲ್ಲಿ ಶಿವಪುರು ಕಡೆಯಿಂದ ಒಂದು ಟ್ರಾಕ್ಟರ ಬರುವುದು ನೋಡಿದೆವು. ಆಗ ನಾವು ರಸ್ತೆ ಮೇಲೆ ನಿಂತಿದ್ದಾಗ ಟ್ರಾಕ್ಟರ ಚಾಲಕನು ತನ್ನ ಟ್ರಾಕ್ಟರನ್ನು ರಸ್ತೆಯಲ್ಲಿ ನಿಲ್ಲಿಸಿ ಸ್ಥಳದಲ್ಲಿ ಟ್ರಾಕ್ಟರ ಬಿಟ್ಟು ಓಡಿ ಹೋಗಿರುತ್ತಾನೆ. ನಂತರ ಟ್ರಾಕ್ಟರನ್ನು ಪರಿಶೀಲನೆ ಮಾಡಿ ನೋಡಿದಾಗ

ಟ್ರಾಕ್ಟರಗನಲ್ಲಿ ಮರಳು ತುಂಬಿರುವುದು ಕಂಡುಬಂದಿರುತ್ತದೆ. 12-30 ರಿಂದ 2-00 ಗಂಟೆವರೆಗೆ ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತೇವೆ. ನಂತರ ಠಾಣೆಗೆ ಮರಳಿ ವರದಿ ಸಲ್ಲಿಸಿರುತ್ತೇವೆ.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ಟ್ರಾಕ್ಟರನ ಭಾವಚಿತ್ರಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**1** ರಿಂದ **4** ಎಂದು ಗುರುತಿಸಲಾಯಿತು.

ಓಡಿಹೋದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಗೆ ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **RDS** ವಕೀಲರಿಂದಃ-</u>

ಅಪರಾದ ಕುರಿತು ಭಾತ್ಮಿ ಬಂದಾಗ ಪೋಲಿಸರು ಅಪರಾದ ಗುನ್ಸ್ಥಳಕ್ಕೆ ಹೋಗುತ್ತಾರೆ ಎಂದರೆ ಸರಿ ಮತ್ತು ತಡೆಯಲು ಪ್ರಯತ್ನಿಸುತ್ತಾರೆ ಎಂದರೆ ಸರಿ. ನನ್ನ ಸಾಕ್ಷಿ ಹೇಳಿಕೆಯಲ್ಲಿ ಮಲ್ಲಯ್ಯನ ದೇವಸ್ಥಾನ ಹತ್ತಿರ ಕಾಯುತ್ತಾ ಕುಳಿತಿರುತ್ತೇವೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಜಪ್ತಿ ಪಡಿಸಿಕೊಂಡ ಟ್ರಾಕ್ಟರನ ಬಣ್ಣ ಹಸಿರು ಇರುತ್ತದೆ. ಓಡಿಹೋದ ಚಾಲಕನನ್ನು ಹಿಡಿಯಲು ಪ್ರಯತ್ನಿಸಿಲ್ಲ. ಪಂಚರನ್ನು ಚಾಸಾ1 ರವರು ಕರೆಸಿರುತ್ತಾರೆ. ಆರೋಪಿತನಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ